ವಿಷಯ:- ಉಡುಪಿಯಲ್ಲಿ ಕುಡಿಯುವ ನೀರಿನ ತೊಂದರೆ.

19(97)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉಡುಪಿ ನಗರ ಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು; ವಿವರ ನೀಡುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಬಂದಿದೆ. ಉಡುಪಿ ನಗರಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು 2155 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಒ.ಇ.ಸಿ.ಎಫ್.ಹಣಕಾಸು ಸಂಸ್ಥೆಯವರಿಗೆ (ಜಪಾನ್)ಸಾಲ ಪಡೆಯುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

ಶ್ರೀ ಯು.ಆರ್. ಸಭಾಪತಿ:- ನಲವತ್ತೈದು ಸಾವಿರ ಜನಸಂಖ್ಯೆ ಇದ್ದ ಪುರ ಸಭೆಯನ್ನು ಈಗ ನಗರಸಭೆಯನ್ನಾಗಿ ಪರಿವರ್ತಿಸಿ ಸುಮಾರು ಒಂದು ಲಕ್ಷ ಜನಸಂಖ್ಯೆ ಇರುವ ನಗರಸಭೆಯಾಗಿದೆ. ಕಳೆದ ವರ್ಷ ಏಪ್ರಿಲ್ ಮೇ ತಿಂಗಳಲ್ಲಿ ನೀರಿನ ತೊಂದರೆ ಬಹಳಷ್ಟು ಉಂಟಾದ ಸಂದರ್ಭದಲ್ಲಿ ಸುಮಾರು ಹದಿನೈದು ಇಪ್ಪತ್ತು ಟ್ಯಾಂಕರ್‌ಗಳನ್ನು ತರಿಸಿ ನಾವು ಸಾರ್ವಜನಿಕರಿಂದ ದೇಣಿಗೆ ರೂಪದಲ್ಲಿ ಹಣ ಸಂಗ್ರಹಿಸಿ ಎರಡು ತಿಂಗಳ ಕಾಲ ನೀರು ಸರಬರಾಜು ಮಾಡಿದ್ದೇವೆ. ಆದರೆ ಇವತ್ತು ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿವೆ ಎಂದು ಇಪ್ಪತ್ತೊಂದು ಕೋಟಿ ರೂಪಾಯಿ ಅಂದಾಜು ಪಟ್ಟಿ ತಯಾರಿಸಿ ಯೋಜನೆಯೊಂದನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿದೆಯೆಂದು ಹೇಳಿದ್ದೀರಿ. ಕಳೆದ ವರ್ಷ ಹಾಗೆ ಈ ವರ್ಷವೂ ನಾವು ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಿ ಟ್ಯಾಂಕರ್ ಉಪಯೋಗಿಸುವ ಪರಿಸ್ಥಿತಿಯಲ್ಲಿಲ್ಲ. ಒಂದೊಂದು ಲಾರಿ ಬಾಡಿಗೆ ಒಂದೊಂದು ದಿವಸಕ್ಕೆ ಒಂದೂವರೆ ಸಾವಿರ ರೂಪಾಯಿ ಆಗುತ್ತದೆ. ನಾವು ಎರಡು ತಿಂಗಳ ಕಾಲ ಒದ್ದಾಡಿದ್ದೇವೆ. ಆ ಎರಡು ತಿಂಗಳಿಗೆ ತಾವು ಏನಾದರೂ ನೀರು ಸರಬರಾಜು ಮಾಡಿದ್ದಕ್ಕೆ ವಿಶೇಷ ಅನುದಾನ ಕೊಡುವ ಕ್ರಮ ಇದೆಯೇ ಅಥವಾ ನಾವೇ ಸಾರ್ವಜನಿಕ ದೇಣಿಗೆ ರೂಪದಲ್ಲಿ ಹಣ ಸಂಗ್ರಹಿಸಿ ಮಾಡಬೇಕೇ? ಮುನಿಸಿಪಾಲಿಟಿ ವತಿಯಿಂದ ನೀರು ಸರಬರಾಜು ಮಾಡುವುದಕ್ಕೆ ಆದಾಯ ಇಲ್ಲ. ಇದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ?

ಶ್ರೀ ಬಿ.ಎನ್. ಬಚ್ಚೇಗೌಡ:- ಆ ಪಟ್ಟಣಕ್ಕೆ ಈಗಾಗಲೇ ನೀರು ಕೊಡತಕ್ಕ ವ್ಯವಸ್ಥೆ ಇದೆ. ಇನ್ನೂ ಹೆಚ್ಚಿನ ನೀರನ್ನು ಒದಗಿಸಬೇಕೆಂದು ಕೇಳಿದ ಮೇಲೆ ಒಂದು ವೆಂಟೆಡ್ ಡ್ಯಾಮ್ ಕಟ್ಟುವ ಸಲುವಾಗಿ ಸುಮಾರು ಇಪ್ಪತ್ತೊಂದು ಕೋಟಿ ಐವತ್ತೈದು ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರಿಸಲಾಗಿದೆ. ಈ ರಾಜ್ಯದ ಸುಮಾರು 19 ಪಟ್ಟಣಗಳಿಗೆ ನಾನೂರ ನಲವತ್ತು ಕೋಟಿ ರೂಪಾಯಿ ಯೋಜನೆಯನ್ನು ತಯಾರಿಸಿ ಒ.ಇ.ಸಿ.ಎಫ್ ಸಂಸ್ಥೆಯಿಂದ ಹಣ ಪಡೆಯುವ ಸಲುವಾಗಿ

ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಅವರು ಇದೇ 17ನೇ ತಾರೀಖು ಕರ್ನಾಟಕಕ್ಕೆ ಈ 19 ಯೋಜನೆಗಳನ್ನು ನೋಡುವುದಕ್ಕೆ ಬರುತ್ತಿದ್ದಾರೆ. ವೆಂಟೆಡ್ ಡ್ಯಾಮ್ ಕಟ್ಟುವುದಕ್ಕೆ ಒ.ಇ.ಸಿ.ಎಫ್ ನವರು ಕೊಡತಕ್ಕದ್ದು 17 ಕೋಟಿ ರೂಪಾಯಿಗಳು ಮತ್ತು ನಮ್ಮ ಸರ್ಕಾರದವರು ಕೊಡತಕ್ಕದ್ದು 4 ಕೋಟಿ 55 ಲಕ್ಷ ರೂಪಾಯಿಗಳು. ಇದು ಇವತ್ತು ನಾವು ಮಾಡಿರತಕ್ಕ ಆರ್ಥಿಕ ಮಾದರಿ. ತಾವು ಹೇಳಿದ ಹಾಗೆ ಕಳೆದ ವಷರ ಆದ ತೊಂದರೆಯನ್ನು ಈ ವರ್ಷ ಭರಿಸಬೇಕೆಂದು ನಾವು ಮೈಂಟೆನೆನ್ಸ್ ಎಲ್ಲವನ್ನೂ ಆಯಾಯ ನಗರಸಭೆಗಳಿಗೆ ಮತ್ತು ಪುರಸಭೆಗಳಿಗೆ ಒಪ್ಪಿಸಿದ್ದೇವೆ. ಈ ಸಾರಿ ಅವರೇ ನೀರಿನ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕೇನಾದರೂ ವಿಶೇಷ ಪರಿಸ್ಥಿತಿ ಇದ್ದರೆ ಅದನ್ನು ಪರಿಶೀಲಿಸಿ ಸಹಾಯ ಮಾಡುವ ಕಾರ್ಯ ಮಾಡುತ್ತೇವೆ.

ಶ್ರೀ ಯು.ಆರ್. ಸಭಾಪತಿ:- ಉಡುಪಿ ಪುರಸಭೆಯ ಮೊದಲ ಹಂತದ ಯೋಜನೆ ಏನಿದೆ ಅದು 25 ವರ್ಷಗಳ ಹಿಂದೆ ಮಾಡಿದಂಥ ಯೋಜನೆ. ಆ ಯೋಜನೆ ಈಗ 25 ವರ್ಷದ ನಂತರ ತೀವ್ರ ತುರ್ತುಪರಿಸ್ಥಿತಿಯ ರೂಪದಲ್ಲಿ ಆಗಿದೆ. ಕಳೆದ ಭಾರಿ ನಾವು ಮಣಿಪಾಲ್ ಆಸ್ಪತ್ರೆ ಮತ್ತು ಅಲ್ಲಿನ ಹಾಸ್ಟೆಲ್‌ಗಳ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಿಸಿದ್ದೇವೆ. ಹೀಗಿರುವಾಗ ಮುನಿಸಿಪಾಲಿಟಿಯಿಂದ ಎಲ್ಲವನ್ನೂ ಮಾಡಬೇಕೆಂದರೆ ಮುನಿಸಿಪಾಲಿಟಿಯಲ್ಲಿ ಯಾವುದೇ ಹಣ ಇರುವುದಿಲ್ಲ.

ಅಧ್ಯಕ್ಷರು:- ಅವರು ಎಕ್ಸಾಮಿನ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಒಂದು ವೇಳೆ ನೀರಿನ ತೊಂದರೆ ಆದಾಗ ಅದಕ್ಕೆ ಕಂದಾಯ ಇಲಾಖೆಯ ಮೂಲಕ ಹಣ ಕೊಡಿಸುವ ವ್ಯವಸ್ಥೆ ಮಾಡುತ್ತೇವೆ.

ವಿಷಯ:- ರಾಜ್ಯದಲ್ಲಿರುವ ಜವಳಿ ಗಿರಿಣಿಗಳ ಸಂಖ್ಯೆ ಹಾಗೂ ಹತ್ತಿ ಮಂಡಳಿ ರಚನೆ.

20(106)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ಜವಳಿ ಗಿರಣಿಗಳೆಷ್ಟು; ಈ ಗಿರಣಿಗಳು ಯಾವ ಯಾವ ಜಿಲ್ಲೆಗಳಲ್ಲಿವೆ;

ಆ) ರಾಜ್ಯದಲ್ಲಿ ಹತ್ತಿ ಉತ್ಪಾದನೆಯ ಪ್ರಮಾಣವೆಷ್ಟು? ಜಿಲ್ಲಾವಾರು ವಿವರ ನೀಡುವುದು;

ಇ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಹತ್ತಿ ಪ್ರಮಾಣಕ್ಕೆ ಈಗಿರುವ ಜವಳಿ ಗಿರಿಣಿಗಳು ಸಾಕಾಗುತ್ತಿವೆಯೇ;

ಈ) ರಾಜ್ಯದ ರೈತರ ಹಿತದೃಷ್ಟಿಯಿಂದ ಪ್ರತ್ಯೇಕ ಹತ್ತಿ ಮಂಡಳಿಯನ್ನು ರಚಿಸುವ ಉದ್ದೇಶ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?